ಶ್ರೀ ಆರ್. ಬಿ. ಚೌಧರಿ, ಅವರು ತಮ್ಮ ದಿನಾಂಕ ೧೨-೬-೧೯೯೦ರ ಪತ್ರದಲ್ಲಿ ಕೆಲವು ಆರೋಪಗಳನ್ನು ಹೊರಿಸಿ ಪತ್ರ ಬರೆದಿದ್ದಾರೆ. ಈ ಆರೋಪಗಳ ಬಗ್ಗೆ ವಿಚಾರಣೆ ನಡೆಸಲು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು ಇವರನ್ನು ನೇಮಕ ಮಾಡಿದ್ದು, ಅವರಿಂದ ವಿಚಾರಣಾ ವರದಿ ಬಂದ ಕೂಡಲೇ ನಿಯಮಾನುಸಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

IV. ತಿಪಟೂರು ತಾಲ್ಲೂಕಿನಲ್ಲಿ ತೆಂಗಿನ ಬೆಳೆ ಕಪ್ಪುತಲೆ ಹುಳಗಳ ರೋಗದಿಂದ ನಾಶವಾಗುತ್ತಿರುವುದು

ಶ್ರೀ ಟಿ. ಎಂ. ಮಂಜುನಾಥ್.— ತಿಪಟೂರು ತಾಲ್ಲೂಕಿನಲ್ಲಿ ತೆಂಗಿನ ಬೆಳೆಗೆ ಕಪ್ಪುತಲೆ ಹುಳುಗಳ ರೋಗದಿಂದ ತೆಂಗಿನ ಮರಗಳು ನಾಶವಾಗುತ್ತಿರುವ ಬಗ್ಗೆ ಸರಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾನ್ಯ ವ್ಯವಸಾಯ ಮತ್ತು ತೋಟಗಾರಿಕಾ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಸದಸ್ಯರು ಎತ್ತಿದಂತಹ ಪ್ರಶ್ನೆಯನ್ನು ವ್ಯವಸಾಯ ಮತ್ತು ತೋಟಗಾರಿಕೆ ಮಂತ್ರಿಗಳ ಗಮನಕ್ಕೆ ತರಲಾಗುವುದು. ಅವರಿಗೆ ಉತ್ತರವನ್ನು ಒದಗಿಸಲಾಗುವುದು.

V. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ಕಲ್ಲಡ್ಕ ಪೇಟೆಯನ್ನು ಹಾದು ಪುತ್ತೂರಿಗೆ ಹೋಗುವ ಬಸ್ಸುಗಳಿಗೆ ಕಲ್ಲಡ್ಕನಲ್ಲಿ ಸ್ಟಾಂಪ್ ಕೊಡಲು ಒತ್ತಾಯ

ಶ್ರೀ ಎ. ರುಕ್ಮಯ್ಯ ಪೂಜಾರಿ.— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನನಿತ್ಯ ಮಂಗಳೂರಿನಿಂದ ಕಲ್ಲಡ್ಕ ಪೇಟೆಯನ್ನು ಹಾದು ಪುತ್ತೂರಿಗೆ ಹಲವಾರು ನಾನ್-ಸ್ಟಾಪ್ ಬಸ್ಸುಗಳು ಮತ್ತು ಎಕ್ಸ್‌ಪ್ರೆಸ್ ಬಸ್ಸುಗಳು ಹಾಗೆಯೇ ಬೇರೆ ಊರುಗಳಿಗೆ ಕೂಡಾ ಎಕ್ಸ್‌ಪ್ರೆಸ್ ಬಸ್ಸುಗಳು ಓಡುತ್ತಿರುತ್ತದೆ. ಇಂತಹ ಹಲವಾರು ಸಂದರ್ಭಗಳಲ್ಲಿ ಬಸ್ಸುಗಳಲ್ಲಿ ಸರ್ವೇ ಸಾಮಾನ್ಯವಾಗಿ ಬೇಕಾದಷ್ಟು ಪ್ರಯಾಣಿಕರಿರುವುದಿಲ್ಲ. ಕಲ್ಲಡ್ಕವು ಹಲವಾರು ಗ್ರಾಮಗಳಿಗೆ ಕೇಂದ್ರವಾಗಿರುವುದರಿಂದ ದಿನನಿತ್ಯ ತುಂಬಾ ಜನ ಪ್ರಯಾಣಿಕರು ಕಲ್ಲಡ್ಕಕ್ಕೆ ಬಂದು ಬೇರೆ ಬೇರೆ ಊರುಗಳಿಗೆ ಪ್ರಯಾಣಿಸ ಬೇಕಾಗುವುದರಿಂದ ಇಂತಹ ನಾನ-ಸ್ಟಾಪ್ ಮತ್ತು ಎಕ್ಸ್‌ಪ್ರೆಸ್ ಬಸ್ಸುಗಳಿಗೆ (ಸುವಿಹಾರಿ ಅಲ್ಲದ) ಕಲ್ಲಡ್ಕದಲ್ಲಿ ಸ್ಟಾಪ್ ಕೊಟ್ಟರೆ ಸರಕಾರಕ್ಕೆ ಆದಾಯ ಹೆಚ್ಚುವುದು ಮಾತ್ರವಲ್ಲ ನೂರಾರು ಪ್ರಯಾಣಿಕರಿಗೆ ಅನುಕೂಲವಾಗುವುದು. ಇದು ಬಹುಜನರ ಬಹು ದಿನದ ಬೇಡಿಕೆ ಕೂಡಾ ಆಗಿರುತ್ತದೆ. ಆದ್ದರಿಂದ ಇಂತಹ ಬಸ್ಸುಗಳಿಗೆ ಕಲ್ಲಡ್ಕದಲ್ಲಿ ಸ್ಟಾಪ್ ಕೊಡುವಂತೆ ತಕ್ಕ ಕ್ರಮ ತೆಗೆದುಕೊಳ್ಳಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಮಂಗಳೂರು-ಪುತ್ತೂರು ನಡುವೆ ಸಂಚರಿಸುತ್ತಿರುವ ಅತೀ ವೇಗಧೂತ ಸಾರಿಗೆಗಳಿಗೆ ಕಲ್ಲಡ್ಕದಲ್ಲಿ ನಿಲುಗಡೆ ನೀಡಿದೆ. ನಿಗಮವು ಈ ಪ್ರೊಗ್ರೆದಲ್ಲಿ ಈಗ ಪ್ರತ್ಯೇಕ ತಡೆರಹಿತ ಸೌಕರ್ಯವನ್ನು ಒದಗಿಸಿಲ್ಲ. ಹಿಂದೆ ಮಂಗಳೂರು-ಪುತ್ತೂರು ನಡುವೆ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದ್ದ ತಡೆರಹಿತ ಸಾರಿಗೆಗಳನ್ನು ಸಾರ್ವಜನಿಕ ಒತ್ತಾಯಕ್ಕೆ ಮಣಿದು ಅತೀ ವೇಗದ ಸಾರಿಗೆಗಳನ್ನಾಗಿ ಪರಿವರ್ತಿಸಲಾಗಿದೆ. ಕಲ್ಲಡ್ಕ ಗ್ರಾಮಸ್ಥರ ಅನುಕೂಲಕ್ಕಾಗಿ ಇಂತಹ ೭ ಅತೀ ವೇಗದ ಸಾರಿಗೆಗಳಿಗೆ ಕಲ್ಲಡ್ಕ ಗ್ರಾಮದಲ್ಲಿ ಕೂಡಲೇ ನಿಲುಗಡೆ ನೀಡಲು ಕ್ರಮ ಕೈಗೊಳ್ಳಲಾಗುವುದು. ಮುಂಬರುವ ತೀರಿದ ನಂತರ ಇನ್ನೂ ಹೆಚ್ಚಿನ ವೇಗಧೂತ ಸಾರಿಗೆಗಳನ್ನು ಕಲ್ಲಡ್ಕದಲ್ಲಿ ಕೋರಿಕೆ ನಿಲುಗಡೆ ನೀಡುವ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಕುಮಟಾ ತಾಲ್ಲೂಕಿನ ವಳ್ಳಿ ಗ್ರಾಮದ ಬಳಿ ನೀರು ಪಾಲಾದ ತಾಯಿ ಮತ್ತು ಮಗುವಿನ ಕಡೆಯವರಿಗೆ ಪರಿಹಾರಧನ ಒದಗಿಸುವುದು

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಕುಮಟಾ ತಾಲ್ಲೂಕಿನ ವಳ್ಳಿ ಎಂಬ ಗ್ರಾಮದ ಬಳಿ ಆಕಳ ಕರುವೊಂದು ಹಳ್ಳದಲ್ಲಿ ತೇಲಿ ಹೋಗುತ್ತಿದ್ದುದನ್ನು ಉಳಿಸಲು ಹಳ್ಳಕ್ಕಿಳಿದ ತಾಯಿ ಹಾಗೂ ಮಗು ಇಬ್ಬರೂ ನೀರಿನ ಪಾಲಾಗಿದ್ದಾರೆ. ಶರಾವತಿ ನದಿಗೆ ಸೇರುವ ಹಳ್ಳದಲ್ಲಿ

ಜೂನ್ ೩೬ರ ಸಂಜೆ ಶ್ರೀಮತಿ ಮಹದೇವಿ ಬಾಲುಗೌಡ (೩೨) ಮತ್ತು ಆಕೆಯ ಮಗ ವೆಂಕಟರಾಮು ಬಾಲುಗೌಡ (೧೦) ಅವರು ನೀರಿನ ಪಾಲಾಗಿದ್ದಾರೆ.

ಆದ್ದರಿಂದ ಸದರಿ ಸಂತ್ರಸ್ಥರಿಗೆ ಸರ್ಕಾರದಿಂದ ಪರಿಹಾರ ಧನವನ್ನು ಒದಗಿಸುವರೇ ಎಂದು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಸನ್ಮಾನ್ಯ ಕಂದಾಯ ಮಂತ್ರಿಗಳಿಗೆ ಸಂಬಂಧಪಟ್ಟಿರ ತಕ್ಕಂತಹ ಪ್ರಶ್ನೆ. ಇದನ್ನು ಅವರ ಗಮನಕ್ಕೆ ತಂದು ಸಮರ್ಪಕವಾದ ಕಾರ್ಯಕ್ರಮವನ್ನು ನಾವು ಕೈಗೊಳ್ಳುತ್ತೇವೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿನ ಆನಂದಾನ ಬೇಡಿಕೆಗಳ ಮೇಲಿನ ಚರ್ಚೆ

(ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಮಾನ್ಯ ಲೋಕೋಪಯೋಗಿ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ,

ಅಭಿಯಾಚನೆ ಕ್ರಮಾಂಕ ೩೫–ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೩೯,೫೫,೨೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೭,೨೬,೩೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೬–ನೀರಾವರಿ, ಜಲಸಂಚಾರ, ಒಳಚರಂಡಿ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೨೦೯,೬೫,೦೭೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೫,೯೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೫–ಲೋಕೋಪಯೋಗಿ ಕಾಮಗಾರಿ ನಿರ್ಮಾಣ ಹೊರತು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿಗಳ (ನಿರ್ಮಾಣ ಭಿನ್ನ) ಕಾರ್ಯವು ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೮೫,೦೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಾಡುವುದು.

ಅಭಿಯಾಚನೆ ಕ್ರಮಾಂಕ ೪೬–ಕಟ್ಟಡಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆ